

# ಶ್ರೀಲಂಕಾ ಸ್ವಾತಂತ್ರ್ಯದ ಹೆಗ್ಗುರುತು ಇಂಡಿಪೆಂಡೆನ್ಸ್ ಮೆಮೊರಿಯಲ್ ಹಾಲ್

**1972ರಲ್ಲಿ ಗಣರಾಜ್ಯವಾಗಿ ಘೋಷಣೆಗೊಂಡು, ಸಿಲೋನ್ ದ್ವೀಪ ದೇಶ 'ಶ್ರೀಲಂಕಾ' ಎಂದು ಮರುನಾಮಕರಣವಾದ ಸ್ಮರಣಾರ್ಥ ನಿರ್ಮಿಸಲಾದುದು ಇಂಡಿಪೆಂಡೆನ್ಸ್ ಮೆಮೊರಿಯಲ್ ಹಾಲ್!**

■ ಕೋಟೂರ್ ಸಂಪತ್

ಫೆಬ್ರುವರಿ 4, 1948ರಲ್ಲಿ ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಪಡೆದು ಶ್ರೀಲಂಕಾ (ಆಗಿನ ಹೆಸರು ಸಿಲೋನ್) ದ್ವೀಪ ಸ್ವತಂತ್ರ ದೇಶವಾಯಿತು.

ಸಿಲೋನ್ ದ್ವೀಪ ದೇಶದ ಸ್ವಾತಂತ್ರ್ಯ ಹೋರಾಟ ಶಾಂತಿಯುತ ರಾಜಕೀಯ ಚಳವಳಿಯಾಗಿತ್ತು. ಬ್ರಿಟಿಷರ ಪರೋಕ್ಷ ಮತ್ತು ನೇರ ಆಳ್ವಿಕೆಯಿಂದ ಸ್ವ–ಆಡಳಿತ ಸಾಧಿಸುವ ಗುರಿಯನ್ನು ಹೊಂದಿದ್ದ ಅಂದಿನ ಸಿಲೋನ್, ಆಂಗ್ಲರಿಂದ ಬಿಡುಗಡೆ ಬಯಸಿ ಆರಿಸಿಕೊಂಡದ್ದು ಘರ್ಷಣೆ ಇಲ್ಲದ ಶಾಂತಿ ಮಾರ್ಗ.

ಬ್ರಿಟಿಷರಿಂದ ವಿಮೋಚನೆಗಾಗಿ ಶಾಂತಿಪ್ರಧಾನ ಮಾತುಕತೆಯಲ್ಲಿಯೇ ತೊಡಗಿತ್ತು ಸಿಲೋನ್. ಈ ಸಂಘರ್ಷರಹಿತ ಸ್ವಾತಂತ್ರ್ಯ ಚಟುವಟಿಕೆ ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ ವಿದ್ಯಾವಂತ ಮಧ್ಯಮ ವರ್ಗದ ನೇತೃತ್ವದಲ್ಲಿ ಆರಂಭಗೊಂಡು ಸಫಲತೆ ಪಡೆಯಿತು ಕೂಡ.

1948ರಿಂದ 1972ರವರೆಗೆ ಈ ದ್ವೀಪ ದೇಶವನ್ನು 'ಸಿಲೋನ್' ಎಂದೇ ಕರೆಯಲಾಗುತ್ತಿತ್ತು. ಕಾಮನ್‌ವೆಲ್ತ್ ಆಫ್ ನೇಷನ್ಸ್‌ನಲ್ಲಿ ಸದಸ್ಯತ್ವ ಪಡೆದಿತ್ತು. ನಂತರ 1972ರಲ್ಲಿ ಗಣರಾಜ್ಯವಾಗಿ 'ಶ್ರೀಲಂಕಾ' ಎಂದು ಮರುನಾಮಕರಣ ಮಾಡಲಾಯಿತು.

ಈ ಮಹತ್ಸಾಧನೆಯ ಸ್ಮರಣಾರ್ಥವೇ ಶ್ರೀಲಂಕಾದ ರಾಜಧಾನಿ ಕೊಲಂಬೊದ ಸಿನ್ನಮನ್ ಗಾರ್ಡನ್ಸ್‌ನಲ್ಲಿ ನಿರ್ಮಿಸಿರುವ ಸಭಾಂಗಣ ಈ ಇಂಡಿಪೆಂಡೆನ್ಸ್ ಮೆಮೊರಿಯಲ್ ಹಾಲ್. ಈ ಸ್ವಾತಂತ್ರ್ಯ ಸ್ಮಾರಕ ಸಭಾಂಗಣವನ್ನೇ ಶ್ರೀಲಂಕಾದ ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲಾಗಿದೆ. ಸ್ಮಾರಕ ಸಭಾಂಗಣ ಕಟ್ಟಿರುವ ಸ್ಥಳದಲ್ಲಿಯೇ 1948ರಲ್ಲಿ ಬ್ರಿಟಿಷ್ ಅಧಿಕಾರಿ ಆಗಿನ ಸಿಲೋನ್ ದೇಶವನ್ನು ಸ್ವತಂತ್ರವೆಂದು ಘೋಷಿಸಿ ಹಸ್ತಾಂತರ ಮಾಡಿದ್ದು.

ದೇಶದ ಪ್ರಥಮ ಪ್ರಧಾನಿಯಾಗಿ ಡಾನ್ ಸ್ಟೀಫನ್ ಸೇನಾ ನಾಯಕ ಪದವಿ ಸ್ವೀಕರಿಸಿದರು. ಇವರ ಪ್ರತಿಮೆಯನ್ನು ಈ ಸ್ಮಾರಕದ ಪ್ರಮುಖ ಜಾಗದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. 19ನೇ ಶತಮಾನದ ರಾಜಭವನ ಕಟ್ಟಡ ವಿನ್ಯಾಸಕ್ಕೆ ಇದು ಸ್ಫೂರ್ತಿಯಾಗಿದೆ.

ದ್ವೀಪ ದೇಶದ ಈ ಪ್ರತಿಷ್ಠಿತ ಸ್ಮಾರಕ ಭವನ ಲೋಕಾರ್ಪಣೆಯಾದಾಗಿನಿಂದಲೂ ಬಹುತೇಕ ವರ್ಷ ಇಲ್ಲಿಯೇ ಫೆಬ್ರುವರಿ 4ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಸರ್ಕಾರದ ವತಿಯಿಂದ ಆಚರಿಸಿಕೊಂಡು ಬರಲಾಗಿದೆ. ಇದು ನೆನಪಿನ ಕಟ್ಟಡವಾಗಿದ್ದರೂ ಹೊಸ ಸಂಸತ್ ಭವನ ನಿರ್ಮಾಣವಾಗುವವರೆಗೂ ಅನೇಕ ಸಂದರ್ಭದಲ್ಲಿ ಸರ್ಕಾರದ ಸಂಸದೀಯ ಕಲಾಪಗಳಿಗೆ ಬಳಸಲಾಗಿತ್ತು.

ಈ ಸ್ಮಾರಕ ಭವನದ ವಿನ್ಯಾಸಕಾರರು ಒಬ್ಬರಲ್ಲ ಇಬ್ಬರಲ್ಲ, ಎಂಟು ಪ್ರಸಿದ್ಧ ವಾಸ್ತುಶಿಲ್ಪಿಗಳ ಸಂಯೋಗದಿಂದ ಕಟ್ಟಡ ರಚನೆಗೊಂಡಿದೆ.

ಪ್ರತಿಕ್ರಿಯಿಸಿ: feedback@sudha.co.in